# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್–153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:08/02/2022 ಮಂಗಳವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಿರಿಯ ಅಭಿಯಂತರರು.
3. ಶ್ರೀ. ರವೀಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
4. ಶ್ರೀ. ವಿಜಯಕುಮಾರ್ ಕೆ.ಆರ್ ಕಿರಿಯ ಆರೋಗ್ಯ ಪರಿವೀಕ್ಷಕರು.
5. ಶ್ರೀ. ಸುನಿಲ್‌ಕುಮಾರ್ ವಿ. ಸ.ಅ (ಬೆಂ.ನೀ.ಸ ಮತ್ತು ಒ. ಮಂಡಳಿ).
6. ಶ್ರೀ. ನಾಗರಾಜ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಜಯನಗರ.
7. ಶ್ರೀ. ವಿಜಯ್‌ಕುಮಾರ್ ಜಿ. ಕಿರಿಯ ಅಭಿಯಂತರರು ಬೆಸ್ಕಾಂ ವಿಭಾಗ.
8. ಶ್ರೀ ಅನೀಸ್ ಅಹಮದ್, ಶ್ರೀ. ಬಹದ್ದೂರ್, ಶ್ರೀ. ಕಮಲ್ ಕಬೀರ್, ಶ್ರೀ. ಫಜಲ್ ಖಾನ್, ಶ್ರೀ. ಸಮೀಹುಲ್ಲಾ, ಶ್ರೀ. ನಾರಾಯಣ್‌ರಾಜು, ಶ್ರೀ. ಅಬ್ದುಲ್ ಹಫೀಜ್, ಶ್ರೀ. ಕಾಶಿಫ್ ಪಾಷ & ಶ್ರೀ. ಡಾ॥ ರಘುನಾಥ್ (ಸಾರ್ವಜನಿಕರು).

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಬೆಸ್ಕಾಂ ಇಲಾಖೆ, ಅಧಿಕಾರಿಗಳು ವಾರ್ಡ್ 153.
2. ಪೊಲೀಸ್ ಇನ್ಸ್‌ಪೆಕ್ಟರ್, ಸಿದ್ಧಾಪುರ, ಬಸವನಗುಡಿ, ತಿಲಕ್‌ನಗರ
3. ಅರಣ್ಯ ಇಲಾಖೆಯ ಅಧಿಕಾರಿಗಳು.

*********

1. ವಾರ್ಡ್–153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:08/02/2022 ಮಂಗಳವಾರದಂದು ಮಧ್ಯಾಹ್ನ 3.00 ಗಂಟೆಗೆ ನಿಗದಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.



Scanned with CamScanner

2. ವಾರ್ಡಿನ ಸ್ಥಳಿಯರಾದ ಡಾ|| ರಘುನಾಥ್ ರವರು ಮಾತನಾಡಿ 1ನೇ ಬ್ಲಾಕ್ ಜಯನಗರ ವ್ಯಾಪ್ತಿಯಲ್ಲಿ ಅಳವಡಿಸಿರುವ ಸಿ.ಸಿ. ಕ್ಯಾಮರಾ ಸುಸ್ಥಿತಿಯ ಬಗ್ಗೆ ಹಾಗೂ ಅವುಗಳ ನಿರ್ವಹಣೆ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಹಾಲಿ ತಾವು ತಿಳಿಸಿರುವ ಕಡೆಗಳಲ್ಲಿ ಈಗಾಗಲೇ ಕಳೆದ ತಿಂಗಳಲ್ಲಿ ಹೊಸದಾಗಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲಾಗಿರುತ್ತದೆ ಹಾಗೂ ಈ ಹಿಂದೆ ಅಳವಡಿಸಿದ್ದ ಸಿ.ಸಿ. ಕ್ಯಾಮರಾಗಳ ಸುಸ್ಥಿತಿಯ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರನ್ನು ಸಂಪರ್ಕಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು**

3. ವಾರ್ಡಿನ ಸ್ಥಳಿಯರಾದ ಶ್ರೀ. ಸಮೀಹುಲ್ಲಾ ರವರು ಮಾತನಾಡಿ 28ನೇ ಅಡ್ಡರಸ್ತೆ, ರೋಷನ್ ಕಾಲೋನಿಯ ರಸ್ತೆಯ ಮಧ್ಯದಲ್ಲಿ ತೆಂಗಿನ ಮರವಿದ್ದು, ಇದರಿಂದ ವಾಹನ ಸವಾರರಿಗೆ ಮತ್ತು ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದ್ದು, ಈ ಬಗ್ಗೆ ಪರಿಶೀಲಿಸಿ ಸದರಿ ಮರವನ್ನು ತೆರವುಗೊಳಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಪ್ರಸ್ತಾಪಿತ ಸ್ಥಳಕ್ಕೆ ತೆರಳಿ, ಸ್ಥಳೀಯರೊಂದಿಗೆ ಸ್ಥಳದ ಮಹಜರ್ ಮಾಡಿ ಸದರಿ ಮರವನ್ನು ತೆರವುಗೊಳಿಸುವ ಬಗ್ಗೆ ಪರಿಶೀಲಿಸಿ ಕಾನೂನು ರೀತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳಿಗೆ ಪತ್ರ ಬರೆದು ತಿಳಿಸುವಂತೆ ಸಭೆಗೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು**

4. ವಾರ್ಡಿನ ಸ್ಥಳಿಯರಾದ ಶ್ರೀ. ಅನಿಸ್ ಅಹಮದ್ ರವರು ಮಾತನಾಡಿ 1ನೇ ಮುಖ್ಯರಸ್ತೆ, ಎಸ್.ಆರ್.ಕೆ ಗಾರ್ಡನ್‌ನಲ್ಲಿ ಬೆಸ್ಕಾಂ ವಿದ್ಯುತ್ ಕಂಬವು ಬಾಗಿದ್ದು, ಸದರಿ ಕಂಬವನ್ನು ಸರಿಪಡಿಸುವಂತೆ ಕೋರಿದರು. ಮತ್ತು ಶ್ರೀ. ಬಹದ್ದೂರ್ ರವರು ಮಾತನಾಡಿ ಗುಲ್ಬರ್ಗ ಕಾಲೋನಿಯ ಬಳಿಯೂ ಸಹ ಬೆಸ್ಕಾಂ ಕಂಬವು ಬಾಗಿದ್ದು, ಸದರಿ ಕಂಬವನ್ನು ಸರಿಪಡಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಸಂಬಂಧಪಟ್ಟ ಬೆಸ್ಕಾಂ ಅಭಿಯಂತರರಿಗೆ ದೂರವಾಣಿ ಕರೆ ಮಾಡಿ ಪ್ರಸ್ತಾಪಿತ ಎರಡು ಕಂಬಗಳನ್ನು ಸರಿಪಡಿಸುವಂತೆ ಸೂಚಿಸಿದರು ಮತ್ತು ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ತಿಳಿಸಿದರು.

**ಕ್ರಮ : ಸ.ಕಾ.ನಿ.ಅ (ಬೆಸ್ಕಾಂ) ಇಲಾಖೆ**



Scanned with CamScanner

5. ವಾರ್ಡ್ 153ರ ಸ್ಥಳೀಯರಾದ ಶ್ರೀ. ನಾರಾಯಣ್‌ರಾಜು ರವರು ಮಾತನಾಡಿ 9ನೇ "ಎ" ಮುಖ್ಯರಸ್ತೆ, 2ನೇ ಬ್ಲಾಕ್ ಜಯನಗರ ರಸ್ತೆಯಲ್ಲಿರುವ ಮರಗಳ ರೆಂಬೆಗಳನ್ನು ಕತ್ತರಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳಿಗೆ ತಿಳಿಸಿ ಈ ಬಗ್ಗೆ ಪರಿಶೀಲಿಸಿ ರಸ್ತೆಗೆ ಅಡ್ಡಲಾಗಿರುವ ಹಾಗೂ ಸಾರ್ವಜನಿಕರಿಗೆ ಅಡಚಣೆ ಉಂಟು ಮಾಡುತ್ತಿರುವ ರೆಂಬೆ-ಕೊಂಬೆಗಳನ್ನು ಕತ್ತರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**ಕ್ರಮ: ಅರಣ್ಯಾಧಿಕಾರಿಗಳು (ದಕ್ಷಿಣ)**

6. ವಾರ್ಡ್ 153ರ ಸ್ಥಳೀಯರಾದ ಶ್ರೀ. ಕಮಲ್ ಕಬೀರ್ ರವರು ಮಾತನಾಡಿ ಎಸ್.ಆರ್.ಕೆ ಗಾರ್ಡನ್ ಬಳಿಯ ಬಾಲ್ಡ್‌ವಿನ್ ಸ್ಕೂಲ್ ಬಳಿ ಬೆಂ.ನೀ.ಸ. ಮತ್ತು ಒಳಚರಂಡಿ ಮಂಡಳಿಯವರು ಚೇಂಬರ್ ನಿರ್ಮಿಸಿ, ನಂತರ ಡೆಬ್ರಿಸ್ ತೆರವುಗೊಳಿಸದೇ ಅಲ್ಲೇ ಉಳಿಸಿರುತ್ತಾರೆ ಆದ್ದರಿಂದ ಸದರಿ ಡೆಬ್ರಿಸ್‌ನ್ನು ತೆರವುಗೊಳಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಸಭೆಯಲ್ಲಿ ಹಾಜರಿದ್ದ, ಶ್ರೀ. ಸುನಿಲ್‌ಕುಮಾರ್, ಸಹಾಯಕ ಅಭಿಯಂತರರು ರವರಿಗೆ ಸದರಿ ಡೆಬ್ರಿಸ್‌ನ್ನು ಕೂಡಲೇ ತೆರವುಗೊಳಿಸುವಂತೆ ಸೂಚಿಸಿದರು.

**ಕ್ರಮ :ಸ.ಕಾ.ನಿ.ಅ (ಬೆಂ.ನೀ.ಸ & ಒ. ಮಂಡಳಿ)**

7. ವಾರ್ಡ್ 153ರ ಸ್ಥಳೀಯರಾದ ಶ್ರೀ. ಫಜಲ್‌ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಆಫೀಸರ್ಸ್ ಲೇಔಟ್ ಸುತ್ತ-ಮುತ್ತ ಅನಧಿಕೃತವಾಗಿ ವಾಹನ ನಿಲುಗಡೆ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ, ಈಗಾಗಲೇ ಹಲವಾರು ಸಭೆಯಲ್ಲಿ ಮನವಿ ಮಾಡಿದರೂ ಸಹ ಸಂಚಾರ ಪೋಲೀಸ್ ಠಾಣೆ ರವರು ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳು ಯಾವುದೇ ವಾಹನಗಳನ್ನು ಅನಧಿಕೃತವಾಗಿ ನಮ್ಮ ಬಡಾವಣೆಯಲ್ಲಿ ನಿಲ್ಲಿಸಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ಅಭಿಯಂತರರಿಗೆ ಸಂಬಂಧಪಟ್ಟ ಪೋಲೀಸ್ ಇನ್ಸ್‌ಪೆಕ್ಟರ್ ರವರು ಮುಂದಿನ ಸಭೆಗೆ ಹಾಜರಾಗಿ ಈ ಬಗ್ಗೆ ಮಾಹಿತಿ ಒದಗಿಸುವಂತೆ ತಿಳಿಸಲು ಹಾಗೂ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದರು.

**ಕ್ರಮ : ಪೋಲೀಸ್ ಇನ್ಸ್‌ಪೆಕ್ಟರ್ (ಮೈಕೊ ಲೇಔಟ್ ಸಂಚಾರ)**



Scanned with CamScanner

8. ವಾರ್ಡ್ 153ರ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ ಲಾಲ್‌ಬಾಗ್ ಸಿದ್ಧಾಪುರ ಗೇಟ್ ಸಿಗ್ನಲ್ ಬಳಿ ಬೆಳಗ್ಗೆ 8.00 ರಿಂದ 9.00 ಮತ್ತು ಸಂಜೆ 5.00 ರಿಂದ 7.00 ರ ತನಕ ಒಬ್ಬರು ಟ್ರಾಫಿಕ್ ಪೋಲೀಸ್ ಸಿಬ್ಬಂದಿಯನ್ನು ನಿಯೋಜಿಸುವಂತೆ ಕೋರಿದರು. ಹಾಗೂ ಸಿಗ್ನಲ್ ಲೈಟ್ ಸರಿಯಾಗಿ ಸಾರ್ವಜನಿಕರಿಗೆ ಕಾಣುವಂತೆ ಕ್ರಮ ಕೈಗೊಳ್ಳಲು ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಾಗಿದ್ದ, ಜಯನಗರ ಸಂಚಾರ ಪೋಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ಶ್ರೀ. ನಾಗರಾಜ್ ರವರಿಗೆ ಸದರಿ ಸ್ಥಳದಲ್ಲಿ ಸಿಬ್ಬಂದಿ ನಿಯೋಜಿಸಿ ಹಾಗೂ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಸಿಗ್ನಲ್ ಲೈಟ್ ಸರಿಯಾಗಿರುವಂತೆ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದರು.

**ಕ್ರಮ : ಪೋಲೀಸ್ ಇನ್‌ಸ್ಪೆಕ್ಟರ್, ಸಂಚಾರ (ಜಯನಗರ)**

9. ವಾರ್ಡ್ 153ರ ಸ್ಥಳೀಯರಾದ ಶ್ರೀ. ರಘುನಾಥ್ ರವರು ಮಾತನಾಡಿ ಟಿ. ಮರಿಯಪ್ಪ ರಸ್ತೆಯ ಗಿರಯಾಸ್ ಬಳಿ ಮತ್ತು ಮಾಧವನ್ ಪಾರ್ಕ್ ಹತ್ತಿರವಿರುವ ಬಿಗ್ ಆಸ್ಪತ್ರೆ ಬಳಿ ರೋಡ್ ರಂಬಲ್ಸ್‌ಗಳನ್ನು ಅಳವಡಿಸುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಭೆಯಲ್ಲಿ ಹಾಜರಾಗಿದ್ದ, ಜಯನಗರ ಸಂಚಾರ ಪೋಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ಶ್ರೀ. ನಾಗರಾಜ್ ರವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**ಕ್ರಮ : ಪೋಲೀಸ್ ಇನ್‌ಸ್ಪೆಕ್ಟರ್, ಸಂಚಾರ (ಜಯನಗರ)**

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ನವೀನ್‌ಕುಮಾರ್ ಕೆ.)
ಕಾರ್ಯದರ್ಶಿ
ವಾರ್ಡ್-153 ಜಯನಗರ

(ವರಲಕ್ಷ್ಮಮ್ಮ ಎಲ್)
ನೋಡಲ್ ಅಧಿಕಾರಿ
ವಾರ್ಡ್-153 ಜಯನಗರ



Scanned with CamScanner